ಮಾನವ ವಿಕಾಸ



ಆಸ್ಟ್ರೆಲೋಪಿಥಿಕಸ್ ಪ್ರಭೇದ

- ಪ್ರಾಯಶಃ ಮೊತ್ತ ಮೊದಲ ಅನಿವಾರ್ಯ ದ್ವಿಪಾದಿಗಳು ಮತ್ತು ಹೊಮಿನಿನಿ ಪಂಗಡದ ಸದಸ್ಯರು.
- ಆಸ್ಟ್ರೆಲೋಪಿಥ್ ಪ್ರಭೇದಗಳಲ್ಲಿ ಒಂದು, ಸುಮಾರು ಎರಡು ದಶಲಕ್ಷ ವರ್ಷಗಳ ಹಿಂದೆ ಆಫ್ರಿಕಾದಲ್ಲಿ ಹೋಮೋ (genus) ಎಂಬ ಭೇದವು ರೂಪುಗೊಂಡಿತು ಎಂದು ನಂಬಲಾಗಿದೆ

Image credits: Esv, Wikimedia Commons. URL: https://commons.wikimedia.org/wiki/File:Homo_habilis.JPGhttps://commons.wikimedia.org/wiki/File:A.afarensis.jpg. License: Public Domain.



ಹೋಮೋ ಹ್ಯಾಬಿಲಿಸ್

- ಅಕ್ಷರಶಃ 'ಕೈಕೆಲಸಗಾರ ಮಾನವ' ಎಂದು ಅರ್ಥ.
- ಪ್ರಾಯಶಃ ಅತ್ಯಂತ ಮೊದಲ ಹೋಮೋ ಪ್ರಭೇದದವನಾಗಿರಬಹುದು.
- ಶಿಲಾ ಸಾಧನಗಳ ತಂತ್ರಜ್ಞಾನವನ್ನು ಕರಗತ ಮಾಡಿಕೊಂಡಿದ್ದ ಮೊದಲ ಹೊಮಿನಿನ್‌ಗಳಲ್ಲಿ ಒಬ್ಬರು.

Image credits: Lillyundfreya, Wikimedia Commons. URL: https://commons.wikimedia.org/wiki/File:Homo_habilis.-JPG. License: CC-BY-SA.



ಹೋಮೋ ಎರ್ಗಾಸ್ಟರ್

- ಹೆಸರು ಸೂಚಿಸುವಂತೆ 'ಕೆಲಸಗಾರ'
- ದ್ವಿಮುಖ ಕೊಡಲಿಯಂತಹ ವೈವಿಧ್ಯಮಯ ಮತ್ತು ಆಧುನಿಕ ಶಿಲಾ ಸಾಧನಗಳ ಬಳಕೆ ಮಾಡುತ್ತಿದ್ದರು.
- ಬಹುಶಃ ಆಫ್ರಿಕಾದಿಂದ ಹೊರಗೆ ಹೋದ ಮೊದಲ ಹೋಮೋ ಪ್ರಭೇದ

Image credits: H005, Wikimedia Commons. URL: https://en.wikipedia.org/wiki/File:Nariokotome_Boy_Reconstruction.jpg. License: Public Domain.



ಹೋಮೋ ಎರೆಕ್ಟಸ್

- ಹೆಸರಿನ ಅರ್ಥ 'ನೆಟ್ಟಗೆ ನಿಂತ ಮಾನವ'.
- ಯುರೋಪ್ ಮತ್ತು ಏಷಿಯಾಗೆ ಹರಡಿದರು.
- ಇವರಿಗೆ ಬೆಂಕಿಯ ಬಳಕೆ ತಿಳಿದಿತ್ತು ಮತ್ತು ತಮ್ಮ ಆಹಾರವನ್ನು ಬೇಯಿಸುತ್ತಿದ್ದರು.
- ಪ್ರಾಯಶಃ ಆಧುನಿಕ ಬೇಟೆಗಾರ–ಸಂಗ್ರಹಗಾರರಂತೆ ಗುಂಪು ಸಮಾಜಗಳಲ್ಲಿ ಬದುಕುತ್ತಿದ್ದ ಮೊದಲ ಹೊಮಿನಿನ್.

Image credits: Rafaelamonteiro80, Wikimedia Commons. URL: https://en.wikipedia.org/wiki/File:Homo_erectus_new.JPG. License: CC-BY-SA.



ಹೋಮೋ ಹೈಡೆಲ್‌ಬರ್ಗೆನ್ಸಿಸ್

- ಹೋಮೋ ಎರೆಕ್ಟಸ್‌ನ ಗುಣ ಲಕ್ಷಣಗಳನ್ನು ಹೊಂದಿರುತ್ತಾರೆ.
- ಮುಂದೆ ನಿಯಾಂಡರ್‌ಥಾಲ್‌ಗಳಾಗಿ ವಿಕಾಸ ಹೊಂದಿದರು ಎಂದು ನಂಬಲಾಗಿದೆ.

Image credits: Jose Luis Martinez Alvarez, Wikimedia Commons. URL: https://en.wikipedia.org/wiki/File:Homo_heidelbergensis_(10233446).jpg. License: CC-BY-SA.



ಹೋಮೋ ನಿಯಾಂಡರ್‌ಥಾಲೆನ್ಸಿಸ್

- ಇವರ DNAಯ ಶೇ.99.7 ಭಾಗವು ಆಧುನಿಕ ಮಾನವನ DNAಯಲ್ಲಿದೆ
- ಅಪ್ರತಿಮ ಬೇಟೆಗಾರರಾಗಿದ್ದು ವಾಸಕ್ಕಾಗಿ ಗುಡಿಸಲು ಕಟ್ಟುತ್ತಿದ್ದರು ಮತ್ತು ಸಣ್ಣ ಗುಂಪುಗಳಲ್ಲಿ ವಾಸಿಸುತ್ತಿದ್ದರು.
- ಕಲೆ ಮತ್ತು ಅಲಂಕರಿಸುವುದನ್ನು ಅರಿತಿದ್ದರು ಮತ್ತು ಸಾಂಕೇತಿಕ ಆಲೋಚನೆಗಳನ್ನು ಮಾಡುವ ಸಾಮರ್ಥ್ಯ ಅವರಿಗಿತ್ತು ಎಂದು ನಂಬಲಾಗಿದೆ.

Image credits: Tim Evanson, Wikimedia Commons. URL: https://commons.wikimedia.org/wiki/File:Homo_neanderthalensis_adult_male_-_head_model_-_Smithsonian_Museum_of_Natural_History_-_2012-05-17.jpg. License: CC-BY-SA.



ಭೇದ/ಪ್ರಭೇದ	ಇದ್ದ ಕಾಲ ವ್ಯಾಪ್ತಿ (KYA*)	ವಾಸ ಪ್ರದೇಶ	ವಯಸ್ಕ ಎತ್ತರ	ವಯಸ್ಕ ತೂಕ	ತಲೆಬುರುಡೆಯ ಗಾತ್ರ [ಘನ ಸೆಂ.ಮೀ]^3	ಪ್ರಮುಖ ಪಳೆಯುಳಿಕೆ ಕಂಡುಬಂದ ಪ್ರದೇಶ
1. ಆಸ್ಟ್ರೆಲೋಪಿತಿಕಸ್ ಪ್ರಬೇಧ	3,900 - 2,900	ಆಫ್ರಿಕಾ	120 cm (4 ft)	28 - 40 kg (60 - 90 lb)	450	ಇಥಿಯೋಪಿಯಾ (ಲೂಸಿ)
2. ಹೋಮೋ ಹ್ಯಾಬಿಲಿಸ್	2,100 - 1,500	ಆಫ್ರಿಕಾ	110 - 140 cm (4 ft 6 in)	33 - 55 kg (73 - 121 lb)	510 - 660	ತಾಂಜಾನಿಯಾ
3. ಹೋಮೋ ಎರ್ಗಾಸ್ಟರ್	1,900 - 1,400	ಪೂರ್ವ ಮತ್ತು ದಕ್ಷಿಣ ಆಫ್ರಿಕಾ	160 cm (5 ft 3 in)	55 - 60 kg (120 - 130 lb)	700 - 900	ಕೀನ್ಯಾ (ತುರ್ಕಾನಾ ಬಾಲಕ)
4. ಹೋಮೋ ಎರೆಕ್ಟಸ್	1,900 - 70	ಆಫ್ರಿಕಾ, ಯುರೇಶಿಯಾ (ಜಾವಾ, ಚೀನಾ, ಭಾರತ, ಕಾಕಸಸ್)	178 cm (5 ft 10 in)	60 kg (130 lb)	850 (ಆರಂಭದಲ್ಲಿ) - 1,100 (ತರುವಾಯ)	ಚೀನಾ (ಪೀಕಿಂಗ್ ಮಾನವ)
5. ಹೋಮೋ ಹೈಡೆಲ್‌ಬರ್ಗೆನ್ಸಿಸ್	700 - 300	ಆಫ್ರಿಕಾ, ಯುರೇಶಿಯಾ	175 cm (5 ft 9 in)	62 kg (136 lb)	1,100 - 1,400	ಅಟಾಪರ್ಕಾ ಬೆಟ್ಟಗಳು, ಸ್ಪೇನ್
6. ಹೋಮೋ ನಿಯಾಂಡರ್‌ಥಾಲೆನ್ಸಿಸ್	350 - 40	ಯುರೋಪ್, ಪಶ್ಚಿಮ ಏಷ್ಯಾ	170 cm (5 ft 7 in)	55 - 70 kg (121 - 154 lb) (ಕಟ್ಟುಮಸ್ತಾದ ಮೈಕಟ್ಟು)	1,200 - 1,800	ಜರ್ಮನಿ
7. ಹೋಮೋ ಸೇಪಿಯೆನ್ಸ್	200	ಜಗತ್ತಿನಾದ್ಯಂತ	150 - 190 cm (5 ft 7 in - 6 ft 3 in)	50 - 100 kg (110 - 220 lb)	1,300 - 1,500	

* KYA = ಕಿಲೋ ಇಯರ್ಸ್ ಅಗೋ (ಸಾವಿರ ವರ್ಷಗಳ ಹಿಂದೆ); ಅಂದರೆ 3,900 KYA ಅಂದರೆ 3.9ದಶಲಕ್ಷ ವರ್ಷಗಳ ಹಿಂದೆ

ಕೃಪೆ: Table adapted from https://en.wikipedia.org/wiki/Human_evolution

ಐ ವಂಡರ್...
ಶಾಲಾ ವಿಜ್ಞಾನದ ಮರುಶೋಧನೆ

ಅವಿನಾಶ್ ಕುಮಾರ್ ವಿಪ್ರೋದ ಸಾಮಾಜಿಕ ಉಪಕ್ರಮವಾದ ವಿಪ್ರೋ ಅಪ್ಲೈಯಿಂಗ್ ಥಾಟ್ಸ್ ಇನ್ ಸ್ಕೂಲ್ಸ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಇದು ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವತ್ತ ದೇಶದ ವಿವಿಧ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವ ಸಾಮಾಜಿಕ ಸಂಸ್ಥೆಗಳನ್ನು ಬೆಂಬಲಿಸುತ್ತದೆ. ಇವರನ್ನು avinash.kumar@apu.edu.in ಮೂಲಕ ಸಂಪರ್ಕಿಸಬಹುದು.

ಅನುವಾದ: ಸ್ಮಿತಾ ಭಟ್ **ಪರಿಶೀಲನೆ**: ಎಸ್. ಸುಧಾ

Azim Premji University